೧೯೬೭-೬೮ನೇ ಸಾಲಿನಲ್ಲಿ ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಅನುಕೂಲ ಪಡೆದುಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.— ಆ ಸಂಖ್ಯೆ ಈಗ ನನ್ನ ಹತ್ತಿರ ಇಲ್ಲ.

ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಕುರಿತು

೧೨೪೧. ಶ್ರೀ ಬಾಬುರೆಡ್ಡಿ ವಿ. ತುಂಗಳ್, (ಬೀಳಗಿ) — ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇದುವರೆವಿಗೂ ೧೯೬೭ ಮತ್ತು ೧೯೬೮ ನೇ ಸಾಲಿನಲ್ಲಿ ಯಾವುದೇ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಮಾಡಬಾರದೆಂದು ಇಲಾಖೆಯ ನಿರ್ದೇಶಕರು ಜಿಲ್ಲಾಪರಿಷತ್ತುಗಳಿಗೆ ನಿರ್ದೇಶನ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಇದು ಗ್ರಾಮಾಂತರ ಶಿಕ್ಷಣ ಸಂಸ್ಥೆಗಳಿಗೆ ಭಾದಕವಾಗುವುದಿಲ್ಲವೇ?

ಇ) ಈ ಆಜ್ಞೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರವು ಮರು ಆಲೋಚನೆ ಮಾಡುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ, ತುಂಗಳ್,—ಮಾನ್ಯ ಮಂತ್ರಿಯಂವರು ನನ್ನ ಪ್ರಶ್ನೆಗೆ ಇಲ್ಲ, ಉದ್ಭವಿಸುವುದಿಲ್ಲ, ಉದ್ಭವಿಸುವುದಿಲ್ಲ ಎನ್ನುವ ನಕಾರಾತ್ಮಕ ಸರಮಾಲೆಗಳನ್ನು ಇಟ್ಟಿದ್ದಾರೆ. ಅವರೇ ಹೇಳಿದಂತೆ ಒಂದು ಮಾತನ್ನು ನಾನು ಜ್ಞಾಪಕಕ್ಕೆ ತರುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಚಿಕ್ಕಪಡಸಲಿಗೆ ಗ್ರಾಮದಲ್ಲಿ ಗದಂಗಿನ ತೊಂಟದಾರ್ಯ ಸ್ವಾಮಿಗಳು ಹರಳಯ್ಯನವರ ಹೆಸರಿನಲ್ಲಿ ಒಂದು ಮಾಧ್ಯಮಿಕ ಶಾಲೆಯನ್ನು ಪ್ರಾರಂಭ ಮಾಡಿದ್ದಾರೆ, ಅದಕ್ಕೆ ಒಳ್ಳೆಯ ಕಟ್ಟಡವನ್ನು ಕೂಡ ಕಟ್ಟಿದ್ದಾರೆ. ಸಿಬ್ಬಂದಿಯ ವ್ಯವಸ್ಥೆಯನ್ನು ಮಾಡಿದ್ದಾರೆ. ಕಳೆದ ವರ್ಷ ಇದಕ್ಕೆ ಸಂಬಂಧಪಟ್ಟಂತೆ ಆ ಊರಿನಲ್ಲಿ ಒಂದು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿದ್ದು ಅದು ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಈ ವರ್ಷ ಗ್ರಾಂಟ್ ಗೋಸ್ಕರ ಸರ್ಕಾರಕ್ಕೆ ಮನವಿ ಪತ್ರವನ್ನು ಕೂಡ ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಖುದ್ದು ನೋಡಿದಂಥ ಸಂದರ್ಭದಲ್ಲಿ ಮಂತ್ರಿಗಳು ಕೂಡ, ಗ್ರಾಂಟ್ ಕೊಡಬೇಕೆಂದು ಬರೆದರು. ಆದರೆ, ಜಿಲ್ಲಾ ಕಛೇರಿಗೆ ಹೋಗಿ ವಿಚಾರ ಮಾಡಲಾಗಿ, ಇಲಾಖೆಯ ನಿರ್ದೇಶಕರು ಈ ವರ್ಷ ಮುಂದಿನ ವರ್ಷ ಉಚಿತ ಪ್ರಸಾದ ನಿಲಯಗಳಿಗೆ ಧನ ಸಹಾಯ ಕೊಡಬಾರದೆಂದು ಆದೇಶ ಕೊಟ್ಟಿದ್ದಾರೆಂದು ತಿಳಿಸಿದರು. ನಾನು ಆದೇಶದ ಕಾಪಿಯನ್ನು ಕೇಳಿದೆ. ಅದನ್ನು ಕೂಡ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಇಲ್ಲಿ 'ಉದ್ಭವಿಸುವುದಿಲ್ಲವೆಂದು' ಉತ್ತರ ಕೊಡುತ್ತಾರೆ. ಸರ್ಕಾರದ ನೀತಿ ಈ ರೀತಿ ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ರಂಗದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೇ, ದಯವಿಟ್ಟು ಈ ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ಹೇಳುತ್ತೇನೆ. ಈ ವರ್ಷವಾದರೂ. ಚಿಕ್ಕಪಡಸಲಗಿ ಗ್ರಾಮದಲ್ಲಿ ನಡೆಯುವ ಉಚಿತ ಪ್ರಸಾದ ನಿಲಯಕ್ಕೆ ಗ್ರಾಂಟ್ ನೀಡಬೇಕೆಂದು ತಮ್ಮ ಮೂಲಕ ಸಮಾಜ ಕಲ್ಯಾಣ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಖಾಸಗೀ ವಿದ್ಯಾರ್ಥಿನಿಲಯಗಳಿಗೆ ಸಂಬಂಧಪಟ್ಟಂತೆ ಕೇಳುತ್ತಿದ್ದಾರೆ, ರಾಜ್ಯದಲ್ಲಿ ಸುಮಾರು ೨೪೧ ಖಾಸಗೀ ವಿದ್ಯಾರ್ಥಿನಿಲಯಗಳಿವೆ ಕ್ರಮಬದ್ಧವಾಗಿ ಕೆಲಸ ಮಾಡದೇ ಇರುವ ವಿದ್ಯಾರ್ಥಿನಿಲಯಗಳಿಗೆ ಅನುದಾನ ನಿಲ್ಲಿಸಿದ ಪ್ರಕರಣಗಳು ಇವೆ. ೧-೪-೧೯೬೮ರಿಂದ ಜಿಲ್ಲಾಪರಿಷತ್ ವ್ಯಾಪ್ತಿಗೆ ಎಲ್ಲಾ ಅಧಿಕಾರವು ಹೋಗಿದೆ. ಗ್ರಾಂಟ್-ಇನ್-ಏಯಿಡ್ ಹಾಸ್ಟಲುಗಳನ್ನು, ಮಂಜೂರು ಮಾಡುವ, ಗ್ರಾಂಟ್ ಕೊಡುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಜಿಲ್ಲಾ ಪರಿಷತ್‌ನಿಂದ ಪ್ರೊಪೋಸಲ್ ಬಂದರೆ ಈಗಲೂ ಅದನ್ನು ಮಂಜೂರು ಮಾಡಿಸಿಕೊಡಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಎಷ್ಟೋ ಕಡೆ ಹಾಸ್ಟೆಲಂಗಳಲ್ಲಿ ೧೦ ಜನ ವಿದ್ಯಾರ್ಥಿಗಳಿದ್ದು ೫೦ ಜನರ ಹೆಸರಿನಲ್ಲಿ ಗ್ರ್ಯಾಂಟ್ ತೆಗೆದುಕೊಳ್ಳುತ್ತಿದ್ದಾರೆ. ಬೋಗಸ್ ಹಾಸ್ಟಲುಗಳ ಹೆಸರುಗಳ ಮೇಲೆ ಹಣ ಪಡೆಯುತ್ತಿದ್ದಾರೆ. ಇಂಥ ಅಕ್ರಮ ನಮ್ಮಲ್ಲಿ ಇಲ್ಲ. ತಾವು ಒಂದು ವಿಶೇಷ ತಂಡವನ್ನು ಕಳುಹಿಸಿ ವಿಚಾರಣೆ ಮಾಡಿಸಿ. ಕಳೆದ ೫ ವರ್ಷದಿಂದ ಚೆನ್ನಾಗಿ ನಡೆದುಕೊಂಡು ಬಂದಿದ್ದರೆ ಗ್ರ್ಯಾಂಟ್ ಕೊಡಿ, ಇಲ್ಲದಿದ್ದರೆ ಬೇಡ.

ಶ್ರೀ ಜಿ. ಬಸವಣ್ಣಪ್ಪ.— ಸರ್ಕಾರದ ಉದ್ದೇಶ ವಿದ್ಯಾರ್ಥಿನಿಲಯಗಳನ್ನು ಪ್ರೋತ್ಸಾಹಿಸುವುದೇ ಆಗಿದೆ. ಪ್ರಸ್ತುತ ವರ್ಷ ೧೮೦ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳು. ೧೮೦ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳಿಗೆ ಸರ್ಕಾರ ಈಗಾಗಲೇ ಮಂಜೂರಾತಿ ನೀಡಿದೆ. ವಿದ್ಯಾರ್ಥಿನಿಲಯ ಚೆನ್ನಾಗಿ ನಡೆಯುತ್ತಿದ್ದು, ಜಿಲ್ಲಾ ಪರಿಷತ್‌ನಿಂದ ರೋವರ್ಟ್ ಬಂದರೆ ಗ್ರ್ಯಾಂಟನ್ನು ಮಂಜೂರು ಮಾಡಿಸಿ ಕೊಡುತ್ತೇನೆ. ಅವ್ಯವಹಾರ ನಡೆಸುತ್ತಿದ್ದ ಸುಮಾರು ೫೦-೬೦ ವಿದ್ಯಾರ್ಥಿನಿಲಯಗಳನ್ನು ರದ್ದು ಮಾಡಲಾಗಿದೆ. ಇಂಥ ವಿದ್ಯಾರ್ಥಿನಿಲಯಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಬಗರ್ ಹುಕುಂ ಜಮೀನಿನ ಹಂಚಿಕೆ

೧೨೭೮. **ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ)**.—**ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?**

ಅ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಸರಕಾರಿ ಜಮೀನಿನ ವಿಸ್ತೀರ್ಣವೆಷ್ಟು ಹಾಗೂ ಯಾವ ಯಾವ ಊರಿನಲ್ಲಿದೆ.

ಆ) ಆ ಪೈಕಿ ಎಷ್ಟು ವಿಸ್ತೀರ್ಣದಲ್ಲಿ ಬಗರ್‌ಹುಕುಂ ಸಾಗುವಳಿಯಲ್ಲಿದೆ ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು.

ಇ) ಅವರು ಎಷ್ಟು ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದಾರೆ ಹಾಗೂ ಆ ಪೈಕಿ ನಿಮ್ನ ವರ್ಗದವರು ಎಷ್ಟು ಮತ್ತು ಇತರೆಯವರು ಎಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ೧೦,೦೫೧ ಎಕರೆ ೩೬ ಗುಂಟೆ. ಗ್ರಾಮವಾರು ವಿವರಗಳ ಬಗ್ಗೆ ಪಟ್ಟಿ ಲಗತ್ತಿಸಲಾಗಿದೆ.

ಆ) ಆ ಪೈಕಿ ೫೯೯೦-೩೦ ಎಕರೆ ಸರ್ಕಾರಿ ಜಮೀನು ೩೧೫೭ ಜನ ಫಲಾನುಭವಿಗಳ ಬಗರ್ ಹುಕುಂ ಸಾಗುವಳಿಯಲ್ಲಿರುತ್ತದೆ.

ಇ) ಆ ಪೈಕಿ ಸದರಿ ಅನಧಿಕೃತ ಸಾಗುವಳಿದಾರರು ಸುಮಾರು ೬ ವರ್ಷಗಳಿಂದ ೧೫ ವರ್ಷಗಳ ಸ್ವಾಧೀನಾನುಭವದಲ್ಲಿರುತ್ತಾರೆ. ಇವರ ಪೈಕಿ ೧೪೫೫ ಜನ ನಿಮ್ನ ವರ್ಗದವರು ಮತ್ತು ೧೨೦೨ ಜನರು ಇತರೆಯವರಾಗಿರುತ್ತಾರೆ.